ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.

ಸಿ.ಸಿ. ನಂ.***813/2023***
ದಿನಾಂಕ ***11.06.2025.***

| | | |
|---|---|---|
| ಪಿರ್ಯಾಧಿದಾರರು | : | ಗಾಯತ್ರಿ ವಿವಿದ್ಧೋದ್ದೇಶ ಸೌಹಾರ್ಧ ಸಹಕಾರ ನಿಯಮಿತ (ರಿ), ಮುಖ್ಯ ರಸ್ತೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಪ್ರತಿನಿಧಿಸುತ್ತಿರುವವರು ಶ್ರೀ ಕೆ.ಪಿ. ನಾಗರಾಜ್ ಬಿನ್ ಪುರುಷೋತ್ತಮ್, ವಯಸ್ಸು 44 ವರ್ಷ. |

ವಿರುದ್ಧ

| | | |
|---|---|---|
| ಆರೋಪಿ | : | ಶ್ರೀ ಶಂಕರ್ ಎಸ್.ವಿ., ಬಿನ್ ವೆಂಕಟಪ್ಪ, ವಯಸ್ಕರು, ವಾಸ ಶೆಡ್ಡಿನಮನೆ, ಹುಲುಮಕ್ಕಿ, ಕೊಪ್ಪ ಅಂಚೆ ಮತ್ತು ತಾಲ್ಲೂಕು-577126, ಚಿಕ್ಕಮಗಳೂರು ಜಿಲ್ಲೆ. |

- - -

## ಆಪಾದನೆ

ಆರೋಪಿಯಾದ ನಿಮ್ಮ ವಿರುದ್ಧ ಪಿರ್ಯಾಧಿದಾರರು ದಾಖಲು ಮಾಡಿರುವ ಪಿರ್ಯಾದು ಏನೆಂದರೆ ನೀವು ರೂ. 41,500/-, 01.08.2023 ನೇ ದಿನಾಂಕವನ್ನು ನಮೂದಿಸಿರುವ ಚೆಕ್ ಸಂ. 484666, ಇಂಡಿಯನ್ ಬ್ಯಾಂಕ್, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ಪಿರ್ಯಾದುದಾರರಿಗೆ ಕೊಡಬೇಕಾದ ಸಾಲದ ಬಾಬ್ತು ನಗದೀಕರಣಕ್ಕಾಗಿ ಕೊಟ್ಟಿದ್ದು, ಪಿರ್ಯಾದಿದಾರರು ಅದನ್ನು ಜಮಾವಣೆಗಾಗಿ ಕರ್ನಾಟಕ ಬ್ಯಾಂಕ್ ಲಿ., ಕೊಪ್ಪ ಶಾಖೆಗೆ ಕೊಟ್ಟಾಗ ಸದರಿ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ಅದನ್ನು ವಾಪಾಸ್ಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟಿದ್ದು, ಅದು ಜಾರಿಯಾಗಿದ್ದರೂ ಸಹಾ ಮತ್ತು ನೀವು ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಮರುಪಾವತಿ ಮಾಡದಿರುವುದಿಲ್ಲ. ಆದ್ದರಿಂದ ನೀವು ಮೋಸಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ಸಹಿ/-11.06.2025.
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ರವರ ನ್ಯಾಯಾಲಯ,
ಕೊಪ್ಪ .